**ಮತದಾರ:** ಬೆರಳಿಗೆ ಹಚ್ಚಿದ ಈ ಶಾಯಿ ಎಷ್ಟು ದಿನಗಳವರೆಗೆ ಇರುತ್ತೆ ಸರ್.
**ಮತಗಟ್ಟೆ ಅಧಿಕಾರಿ:** ಸುಮಾರು ಮೂರು ನಾಲ್ಕು ತಿಂಗಳವರೆಗೆ.
**ಮತದಾರ:** ಹೌದಾ... ಹಾಗಾದ್ರೆ ದಯವಿಟ್ಟು ನನ್ನ ತಲೆ ತುಂಬ ಶಾಯಿ ಹಚ್ಚಿ ಸರ್. ಬ್ರ್ಯಾಂಡ್ ಹೇರ್‌ಡೈ ಹಾಕಿದ್ರೂ ಹದಿನೈದು ದಿನದಲ್ಲಿ ಕೂದಲುಗಳು ಪುನಃ ಬೆಳ್ಳಗಾಗುತ್ತಿವೆ.

***

**ಮಗಳು:** (ಅರ್ಜಿಯೊಂದನ್ನು ಭರ್ತಿ ಮಾಡುತ್ತ) ಅಪ್ಪಾ! ಪರ್ಮನೆಂಟ್ ಐಡೆಂಟಿಫಿಕೇಷನ್ ಮಾರ್ಕ್ ಅಂತ ಇರುವ ಜಾಗದಲ್ಲಿ ಏನೆಂದು ಬರೆಯಲಿ?
**ಅಪ್ಪ:** ಎಡಗೈಯಲ್ಲಿ ಮೊಬೈಲ್ ಅಂತ ಬರಿ.

***

ಮದುವೆಯ ಮರುದಿನ ನವ ದಂಪತಿ ಆರಾಮವಾಗಿ ಬೆಡರೂಮ್‌ನಲ್ಲಿ ಕುಳಿತಿದ್ದರು.
**ಗಂಡ:** ನಿನಗೆ ಎಷ್ಟು ಜನ ಬಾಯ್ ಫ್ರೆಂಡ್ ಇದ್ರು?
**ಹೆಂಡತಿ:** (ತನ್ನ ಬ್ಯಾಗ್‌ನಿಂದ ಒಂದು ಕವರ್ ತೆಗೆದು, ಅದರಲ್ಲಿದ್ದ ಅಕ್ಕಿ ಕಾಳು ಲೆಕ್ಕ ಮಾಡಿ) ಏಳು ಜನ.
**ಗಂಡ:** ಏಳು ಬಾಯ್ ಫ್ರೆಂಡ್ ಇರುವುದು ಈಗಿನ ಕಾಲದಲ್ಲಿ ದೊಡ್ಡ ವಿಷಯವೇನಲ್ಲ ಬಿಡು. ಆದರೆ, ಏನಿದು ಎರಡು ನೂರು ರೂಪಾಯಿ?
**ಹೆಂಡತಿ:** ನಾನು ಯಾರನ್ನಾದರೂ ಬಾಯ್ ಫ್ರೆಂಡ್ ಮಾಡಿಕೊಂಡಾಗ ಅವರ ಹೆಸರಿನಲ್ಲಿ ಒಂದು ಅಕ್ಕಿ ಕಾಳನ್ನು ಈ ಕವರ್‌ನಲ್ಲಿ ಹಾಕುತ್ತಿದ್ದೆ. ಕವರ್‌ನಲ್ಲಿ ಅಕ್ಕಿ ಕಾಳು ತುಂಬಿದ್ದವು. ಅದನ್ನು ಮಾರಿದ್ದರಿಂದ ಸಿಕ್ಕ ಹಣವದು.

***

**ಹೆಂಡತಿ:** ರೀ... ನಾನು ನಿಮಗೋಸ್ಕರ ಪೂಜೆ, ವ್ರತ ಉಪವಾಸ ಏನೂ ಮಾಡುತ್ತಿಲ್ಲ. ಆದರೂ ನೀವು ಚೆನ್ನಾಗಿದ್ದೀರಲ್ಲ?
**ಗಂಡ:** ಅದಕ್ಕೆ ಕಾರಣ ನನ್ನ ಒಳ್ಳೆಯತನ ಮತ್ತು ನಿಯತ್ತು. ಹೀಗಾಗಿಯೇ ದೇವರು ನನ್ನನ್ನು ಚೆನ್ನಾಗಿಟ್ಟಿದ್ದಾನೆ.
**ಹೆಂಡತಿ:** ಎಂತದ್ದು ಇಲ್ಲ. ಯಾವಳೊ ಸುಪನಾತಿ ನನ್ನ ಸವತಿ ನಿಮಗೋಸ್ಕರ ಪೂಜೆ, ವ್ರತ ಮಾಡ್ತಿರ್ಬೇಕು. ಅದಕ್ಕೆ ನೀವಿಷ್ಟು ಚೆನ್ನಾಗಿರೋದು. ಯಾರವಳು ಅಂತ ಹೇಳಿ. ಇಲ್ಲಂದ್ರೆ ನಿಮ್ ಕಥೆ ಇವತ್ ಮುಗಿಯುತ್ತೆ.

***

**ಡಾಕ್ಟರ್:** ಹೇಗಿದ್ದೀರಿ? ಕುಡಿಯೋದನ್ನು ಬಿಟ್ಟಿದ್ದೀರೋ, ಇಲ್ವೊ?
**ರೋಗಿ:** ಈಗ ಕುಡಿಯುವುದನ್ನು ಬಿಟ್ಟಿದ್ದೀನಿ ಡಾಕ್ಟ್ರೆ. ಆದರೆ ಯಾರಾದ್ರೂ ಫೋರ್ಸ್ ಮಾಡಿದ್ರೆ ಕುಡಿತೀನಿ ಅಷ್ಟೆ.
**ಡಾಕ್ಟರ್:** ಸೂಪರ್. ನಿಮ್ಮ ಜೊತೆ ಇದ್ದಾರಲ್ಲ ಇವರು ಯಾರು? ನಿಮ್ಮ ತಮ್ಮನಾ?
**ರೋಗಿ:** ಅಲ್ಲ ಡಾಕ್ಟ್ರೆ. ಕುಡಿಯೋದಕ್ಕೆ ನನಗೆ ಫೋರ್ಸ್ ಮಾಡಲಿ ಅಂತ ಇವನನ್ನ ಕೆಲಸಕ್ಕೆ ಇಟ್ಟುಕೊಂಡಿದ್ದೀನಿ.

**ಕೋಳಿ ಮರಿ:** ಅಮ್ಮ, ಮನುಷ್ಯರು ಹುಟ್ಟಿದ ಕೂಡಲೇ ಚಂದ ಚಂದದ ಹೆಸರಿಡುತ್ತಾರೆ. ನಮಗ್ಯಾಕಮ್ಮ ಯಾರೂ ಹೆಸರು ಇಡಲ್ಲ.
**ತಾಯಿ ಕೋಳಿ:** ಮರಿ ಅವರಿಗೆಲ್ಲ ಹುಟ್ಟಿದ ಮೇಲೆ ಹೆಸರಿಡ್ತಾರೆ. ನಮಗೆ ಸತ್ತ ಮೇಲೆ 'ಚಿಕನ್ 65', 'ಚಿಲ್ಲಿ ಚಿಕನ್', 'ತಂದೂರಿ ಚಿಕನ್', 'ಚಿಕನ್ ಲಾಲಿಪಾಪ್', 'ಚಿಕನ್ ಸುಕ್ಕ' ಅಂತೆಲ್ಲಾ ಹೆಸರಿಡ್ತಾರೆ.

***

ಅಪರೂಪಕ್ಕೆ ರಸ್ತೆಯಲ್ಲಿ ಗೆಳೆಯರ ಭೇಟಿಯಾದಾಗ ನಡೆದ ಕುಶಲೋಪರಿ.
**ಗುಂಡ:** ನನ್ನ ಹೆಂಡತಿ ಬಹಳ ಜೋರು. ನನ್ನನ್ನೇ ಮೂರ್ಖ, ಕೆಲಸಕ್ಕೆ ಬಾರದವನು ಅಂತೆಲ್ಲ ಬೈತಾಳೆ. ನಿನ್ನ ಹೆಂಡತಿ ಹೇಗೆ?
**ತಿಮ್ಮ:** ನನ್ನ ಹೆಂಡತಿಯು ನಿನ್ನನ್ನು ಹಾಗೆಲ್ಲ ಬೈಯೋದಿಲ್ಲ ಬಿಡು. ಯಾಕೆಂದರೆ, ಅವಳಿಗೆ ನಿನ್ನ ಪರಿಚಯವೇ ಇರುವುದಿಲ್ಲ. ಒಮ್ಮೆ ನನ್ನ ಮನೆಗೆ ಬಾ ಪರಿಚಯ ಮಾಡಿಸುತ್ತೇನೆ.


***

**ಬಾಸ್:** ಏನ್ರೀ... ಮೊನ್ನೆ ತಾನೇ ಮೂರು ದಿನ ರಜಾ ಹಾಕಿ ತಿರುಪತಿಗೆ ಹೋಗಿ ಬಂದ್ರಿ. ಮತ್ತೆ ತಿರುಪತಿಗೆ ಹೋಗೋಕೆ ರಜೆನಾ?
**ಉದ್ಯೋಗಿ:** ಬೇಕು ಸಾರ್, ಸೇಫಾಗಿ ವಾಪಸು ಹೋದ್ರೆ ತಿರ್ಗಾ ಬರ್ತೀನಿ ಅಂತ ಬೇಡಿಕೊಂಡಿದ್ದೆ.

***

ಗಂಡ ಹೆಂಡತಿಗೆ ಒಂದು ಪೆಗ್ ವಿಸ್ಕಿ ಹಾಕಿಕೊಟ್ಟ.
**ಹೆಂಡತಿ:** ಛೀ... ತುಂಬಾ ಕಹಿ ಇದೇ ರೀ...
**ಗಂಡ:** ಮತ್ತೆ ನೀನೇನು ಅಂದುಕೊಂಡೆ ನಾನು ದಿನ ಪಾನಕದಂತೆ ಸಿಹಿ ಕುಡಿತಿದ್ದೀನಿ ಅಂದುಕೊಂಡ್ಯಾ? ನಾನೂ ಈ ಕಹಿಯನ್ನೇ ಕುಡಿತಿದ್ದೀನಿ. ಅದರ ಕಷ್ಟ ನನಗೆ ಗೊತ್ತು.

***




**ಸುಬ್ಬಿ:** ನಮ್ಮ ಮದುವೆ ಆಗಿ ಇವತ್ತಿಗೆ ಐದು ವರ್ಷ ಪೂರ್ತಿ ಆಯ್ತು ಕಣ್ರೀ.
**ಸುಬ್ಬ:** ಹೋ... ಹಾಗಾ! ಮತ್ತೆ ಚುನಾವಣೆ ಮಾಡೊ ಚಾನ್ಸ್ ಏನಾದ್ರೂ ಇದ್ಯಾ ಅಥವಾ ಇದೇ ಸರ್ಕಾರ ಮುಂದುವರಿಯುತ್ತಾ?

***

**ಕಲ್ಲೇಶಿ:** ಹೆಣ್ಣುಮಕ್ಕಳು ತಮ್ಮ ತಪ್ಪನ್ನು ಯಾವತ್ತೂ ಒಪ್ಪಿಕೊಳ್ಳಲ್ಲ.
**ಮಲ್ಲೇಶಿ:** ಹಾಗೇನಿಲ್ಲ ನನ್ನ ಹೆಂಡತಿಯಂತೂ ತನ್ನ ತಪ್ಪನ್ನು ಪ್ರತಿದಿನ ಒಪ್ಕೊತಾಳೆ. ನಿಮ್ಮನ್ನು ಮದುವೆಯಾಗಿ ದೊಡ್ಡ ತಪ್ಪು ಮಾಡಿದೆ ಅಂತ.

***

**ತಿಪ್ಪೇಶಿ:** ನನ್ನ ಜೀವನವೇ ಅಯೋಮಯವಾಗಿಬಿಟ್ಟಿದೆ ಕಣೋ.
**ಮಲ್ಲೇಶಿ:** ಯಾಕೋ ಹಾಗಂತಿಯ?
**ತಿಪ್ಪೇಶಿ:** ಕಾರ್ಟೂನ್ ನೋಡೊ ವಯಸ್ಸಿನಲ್ಲಿ ನ್ಯೂಸ್ ನೋಡ್ತಿದ್ದೆ. ಅದಕ್ಕೆ ಕಾರಣ ರಿಮೋಟ್ ಅಪ್ಪನ ಕೈಯಲ್ಲಿ ಇರುತ್ತಿದ್ದದ್ದು. ಈಗ ನ್ಯೂಸ್ ನೋಡೊ ವಯಸ್ಸಿನಲ್ಲಿ ಕಾರ್ಟೂನ್ ನೋಡುತ್ತಿದ್ದೇನೆ. ಈಗ ರಿಮೋಟ್ ಮೊಮ್ಮಕ್ಕಳ ಕೈಯಲ್ಲಿರುತ್ತೆ.

***

**ಸುಬ್ಬಿ:** ರೀ... ಭ್ರಮೆ ಮತ್ತು ವಾಸ್ತವಕ್ಕೆ ಏನು ವ್ಯತ್ಯಾಸ?
**ಸುಬ್ಬ:** ತುಂಬಾ ವ್ಯತ್ಯಾಸ ಇದೆ ಕಣೇ. ಉದಾಹರಣೆಗೆ ನೀನು ಸುಂದರವಾಗಿದ್ದಿ ಅನ್ನುವುದು ಭ್ರಮೆ. ತಿಂಗಳಿಗೆ ಸಾವಿರಾರು ರೂಪಾಯಿ ಬ್ಯೂಟಿಪಾರ್ಲರ್ ಬಿಲ್ಲು ಬರುವುದು ವಾಸ್ತವ.

***

**ಡಾಕ್ಟರ್:** ಅಲ್ವೊ, ಕಾಲಿಗೆ ಹಾವು ಕಚ್ಚಿ ಇನ್ನೂ ಐದು ನಿಮಿಷ ಆಗಿಲ್ಲ ಅಂತಿದ್ದೀಯ. ಅಷ್ಟರಲ್ಲಿ ಆ ವ್ಯಕ್ತಿ ಹೇಗೆ ಸತ್ತ?
**ಗುಂಡ:** ತಲೆಗೆ ವಿಷ ಏರುತ್ತೆ ಅಂತ ಆತನ ಕುತ್ತಿಗೆಗೆ ಜೋರಾಗಿ ಹಗ್ಗ ಬಿಗಿದಿದ್ದೆ.

***

**ಯಮರಾಜ:** (ಮಹಿಳೆಗೆ) ನಡೆ ನಿನ್ನನ್ನು ಕರೆದೊಯ್ಯಲು ಬಂದಿದ್ದೇನೆ.
**ಮಹಿಳೆ:** ಎರಡೇ ನಿಮಿಷ ಕಾಯಿರಿ ಯಮರಾಜ.
**ಯಮರಾಜ:** ಎರಡು ನಿಮಿಷದಲ್ಲಿ ಅಂತಹದ್ದು ಏನು ಮಾಡಲಿರುವೆ?
**ಮಹಿಳೆ:** ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ ಮತ್ತು ಫೇಸ್‌ಬುಕ್‌ನಲ್ಲಿ ಸ್ಟೇಟಸ್ ಹಾಕಬೇಕು. ಹಾಗೇ ಒಂದು ರೀಲ್ಸ್ ಮಾಡ್ಬಿಡ್ತೀನಿ 'ಟ್ರಾವೆಲಿಂಗ್ ಟು ಯಮಲೋಕ' ಅಂತ!

***

**ಗುಂಡ:** ಪರೀಕ್ಷೆಯಲ್ಲಿ ಏನು ಕೇಳಿದ್ದರು?
**ಚಿಂಟು:** 'ಆಲಸ್ಯವೆಂದರೆ ಏನು?' ಎಂಬ ವಿಷಯದ ಮೇಲೆ ಐದು ಪುಟದಷ್ಟು ಪ್ರಬಂಧ ಬರೆಯುವಂತೆ ಟೀಚರ್ ಪ್ರಶ್ನೆ ಕೇಳಿದ್ದರು.
**ಗುಂಡ:** ಅದಕ್ಕೆ ನೀನು ಏನಂತ ಬರೆದೆ?
**ಚಿಂಟು:** ನಾಲ್ಕು ಪುಟಗಳನ್ನು ಖಾಲಿ ಬಿಟ್ಟು ಐದನೆ ಪುಟದಲ್ಲಿ, ದಪ್ಪ ಅಕ್ಷರದಲ್ಲಿ ಆಲಸ್ಯವೆಂದರೆ ಇದೆ ಎಂದು ಬರೆದಿದ್ದೆ.

***

**ಟೀಚರ್:** ಎಲೆಕ್ಟ್ರಿಸಿಟಿ ಇಲ್ಲದೆ ಹೋಗಿದ್ರೆ ಏನಾಗ್ತಿತ್ತು?
**ಗುಂಡ:** ರಾತ್ರಿಯಲ್ಲಿ ಕ್ಯಾಂಡಲ್ ಹಿಡ್ಕೊಂಡು ಟೀವಿ ನೋಡಬೇಕಾಗಿತ್ತು.

ಸಂಗ್ರಹ: ಶರದ ಕುಲಕರ್ಣಿ, ಬೀದರ್